ಹಳೆಯ ಸೀರೆ ಎಂಬ ಹಣೆಪಟ್ಟಿಯೂ ಅಳಿಸಿ ಹಾಕಿದಂತಾಗುವುದು. ಇದೇ ಪ್ರಯತ್ನವನ್ನು ಮಾಡುತ್ತಾ ಹಳೆಯ ಸಾಂಪ್ರದಾಯಿಕ ಸೀರೆಗಳಿಗೆ ಟ್ರೆಂಡಿ ಹಾಗೂ ಆಧುನಿಕ ರೂಪ ನೀಡಲು ಪ್ರಯತ್ನಿಸುತ್ತಿದ್ದಾರೆ ಫ್ಯಾಷನ್ ಡಿಸೈನರ್ ಸೀಮಾ ಎಸ್.ಕೆ.

***

ಹುಬ್ಬಳ್ಳಿಯಲ್ಲಿ ಡಿಸೈನರ್ ಆಗಿರುವ ಸೀಮಾ ಹಳೆಯದರಲ್ಲಿ ಹೊಸತನ ಹುಡುಕುವ ತುಡಿತವುಳ್ಳವರು. ಕಲಾತ್ಮಕ ಡಿಸೈನ್‌ಗಳ ಮೂಲಕ ಮುನ್ನೆಲೆಗೆ ಬರುತ್ತಿರುವ ಅವರಿಗೆ ಹಳೆ ಸೀರೆಗೆ ಹೊಸ ಲುಕ್ ಕೊಡುವ ವಿಚಾರ ಹೊಳೆದಿದ್ದು ಕೋವಿಡ್ ಲಾಕ್‌ಡೌನ್ ಸಮಯದಲ್ಲಿ. ಅದಕ್ಕೂ ಮೊದಲೊಮ್ಮೆ ಪುನರ್‌ಬಳಕೆಗೆ ಸಂಬಂಧಪಟ್ಟು ಹುಬ್ಬಳ್ಳಿಯ ಟೈಕಾನ್ ಸಮಾವೇಶದ ವರ್ಕ್‌ಶಾಪ್‌ವೊಂದರಲ್ಲಿ ಭಾಗವಹಿಸಿದ್ದ ಸೀಮಾ ಅವರನ್ನು ಕಾಡಿದ್ದು ಹಳೇ ಪಾದರಕ್ಷೆಗಳ ಪುನರ್ಬಳಕೆಯ ಉದ್ಯಮ.ಅಲ್ಲಿ ಹಳೇ ಪಾದರಕ್ಷೆಗಳಿಗೆ ಹೊಸ ಲುಕ್ ಕೊಟ್ಟು ಮಾರಾಟ ಮಾಡುವ ಸಕ್ಸಸ್ ಸ್ಟೋರಿಯೇ ಈ ಹಳೇ ಸೀರೆಗೆ ಹೊಸ ಲುಕ್‌ಗೆ ಪ್ರೇರಣೆಯಾಗಿದ್ದು.

ಕೋವಿಡ್ ಲಾಕ್‌ಡೌನ್ ವೇಳೆ ಎಲ್ಲೆಡೆ ಅಂಗಡಿ–ವಹಿವಾಟು ಬಂದ್ ಇರುವ ಸಂದರ್ಭದಲ್ಲಿ ಬಟ್ಟೆ ಖರೀದಿಗೂ ಬ್ರೇಕ್ ಬಿದ್ದಿತ್ತು. ಇಂಥ ಸಮಯದಲ್ಲಿ ಸೀಮಾ ತಮ್ಮ ಕಪಾಟಿನಲ್ಲಿರುವ ಹಲವು ಹಳೆಯ ಸೀರೆಗಳಿಗೆ ಹೊಸ ರೂಪ ನೀಡಲು ಮುಂದಾದರು. ಹೀಗೆ ನವನವೀನ ಅವತಾರ ತಾಳಿದ ಹಳೇ ಸೀರೆಯ ವಸ್ತ್ರ ಧರಿಸಿ ಹೊರಹೋದ ಸೀಮಾ ವಿಶೇಷವಾಗಿ ಹೆಂಗಳೆಯರು ತಿರುತಿರುಗಿ ನೋಡುವಂತೆ ಮಾಡಿದರು. ಹಲವರು ಸೀಮಾ ಅವರ ಹಳೆ ಸೀರೆಗೆ ಹೊಸತನದ ಡಿಸೈನ್‌ಗೆ ಮಾರು ಹೋದರು. ಅವರು ಕೂಡ ತಮ್ಮ ಕಪಾಟಿನಲ್ಲಿ ಬಳಸದೇ ಬಿದ್ದಿದ್ದ ಸೀರೆಗಳಿಗೆ ಹೊಸ ಲುಕ್ ಕೊಡಿಸಲು ಮುಂದಾದರು. ಸೀರೆ ಯಾವ ರೂಪ ತಾಳುವುದೋ ಎಂಬ ಆತಂಕ ಸೀರೆಯ ನಾರಿಯರಿಗಿದ್ದರೂ, ಸೀಮಾ ಕೈಯಲ್ಲಿ ಅರಳಿದ ಹೊಸ ಲುಕ್ ನೋಡಿ ಬೆರಗಾದರು. ತಮ್ಮಿಷ್ಟದ ಸೀರೆಗಳನ್ನು ಹೊಸ ಅವತಾರದಲ್ಲಿ ಧರಿಸಿ ಖುಷ್ ಆದರು.

ಸೀಮಾ ಅವರು ತಮ್ಮ ಕೈಗೆ ಹಳೆ ಸೀರೆ ಸೇರಿದಾಗ, ಗ್ರಾಹಕರು ಹೇಳಿದ ವಿನ್ಯಾಸಕ್ಕೆ ತಕ್ಷಣಕ್ಕೆ ಒಪ್ಪಿಗೆ ಸೂಚಿಸುವುದಿಲ್ಲ. ಬದಲಿಗೆ ಅವರು ಸೀರೆ ಹಾಗೂ ಗ್ರಾಹಕರ ಪರ್ಸನಾಲಿಟಿ ಎರಡನ್ನೂ ತುಲನೆ ಮಾಡಿ ಅವರ ದೇಹಕ್ಕೆ ಹೊಂದುವಂತೆ ವಿನ್ಯಾಸಗೊಳಿಸುತ್ತಾರೆ. ಕಾರಣ ಇಷ್ಟೆ; ನಾವು ಧರಿಸುವ ದಿರಿಸು ನಮ್ಮ ಮನಸ್ಸಿಗೆ ಮಾತ್ರವಲ್ಲದೆ, ದೇಹಕ್ಕೂ ಒಪ್ಪುವಂತಿರಬೇಕು. ಒಂದು ವೇಳೆ ದೇಹಕ್ಕೆ ಸರಿ ಹೊಂದದಿದ್ದಲ್ಲಿ ಅದು ಮನಸ್ಸಿನ ಇರಿಸು ಮುರಿಸಿಗೂ ಕಾರಣವಾಗಲಿದೆ. ಆದ್ದರಿಂದ ಮೈಮನಕ್ಕೆ ಒಪ್ಪುವಂತೆ ಡಿಸೈನ್ ಮಾಡಬೇಕು ಎಂಬ ಅಭಿಪ್ರಾಯ ಸೀಮಾ ಅವರದ್ದು.

## ಮ್ಯಾಚಿಂಗ್ ಮ್ಯಾಚಿಂಗ್

ಹಳೆ ಸೀರೆಯಿಂದ ಸಿದ್ಧಗೊಳ್ಳುವ ಡ್ರೆಸ್ಸಿಗೆ ಅಗತ್ಯವಿದ್ದಲ್ಲಿ ಬೆಲ್ಟ್, ಹಾರ, ಬ್ರೇಸ್ಲೆಟ್‌ಗಳನ್ನು ಅದೇ ಸೀರೆಯಿಂದಲೇ ಸುಂದರವಾಗಿ ಸಿದ್ಧಪಡಿಸುವ ಕಲೆಯೂ ಸೀಮಾಗೆ ಕರಗತ. ಜೊತೆಗೆ ವಿನ್ಯಾಸಗೊಳಿಸುವ ವೇಳೆ ಅಳಿದುಳಿದ ಬಟ್ಟೆಯಿಂದ ಪಾದರಕ್ಷೆಗೂ ಬಳಸಿ ಮ್ಯಾಚಿಂಗ್ ಮಾಡುತ್ತಾರೆ. ಕಿವಿಯೋಲೆಯನ್ನೂ ಡಿಸೈನ್ ಮಾಡುತ್ತಾರೆ. ಎಲ್ಲ ಸೀರೆಗಳೂ ಪ್ಲೇನ್ ಸೀರೆಗಳಾಗಿರುವುದಿಲ್ಲ. ಅವುಗಳಲ್ಲೂ ಜರಿ, ಕಸೂತಿ, ಪ್ಯಾಚ್‌ವರ್ಕ್, ಹೆವಿ ಲೇಸ್, ಹೆವಿ ಪಲ್ಲು ಇರಲಿವೆ. ಇವುಗಳನ್ನೂ ಪ್ರತ್ಯೇಕಿಸಿ ಅವುಗಳಿಂದಲೇ ಜೀರೊ ವೇಸ್ಟ್‌ನಲ್ಲಿ ಹಳೆ ಸೀರೆಯನ್ನು ಮಾಡರ್ನ್ ಡ್ರೆಸ್ಸಾಗಿ ವಿನ್ಯಾಸಗೊಳಿಸುವುದರಲ್ಲಿ ಸೀಮಾ ನಿಸ್ಸೀಮರು.

ಅಷ್ಟಕ್ಕೂ ಸೀಮಾ ಕೇವಲ ಫ್ಯಾಷನ್ ಡಿಸೈನರ್ ಮಾತ್ರವಲ್ಲ. ಅವರು ಮನಸ್ಸಿನ ಒತ್ತಡಗಳನ್ನು ನಿರ್ವಹಿಸುವಲ್ಲೂ ಪ್ರವೀಣರು. ಮನಸ್ಸಿನ ಒತ್ತಡಗಳಿಗೆ ಕಾರಣಗಳು ಹಲವು. ಅವು ನಾವು ಖರೀದಿಸುವ ಗೃಹೋಪಯೋಗಿ ವಸ್ತುಗಳು, ಬಟ್ಟೆಗಳ ಪಾಲೂ ಇವೆ. ಬಳಕೆಯಾಗದೇ ವ್ಯರ್ಥವೆನಿಸುವ ಬಟ್ಟೆಗಳು, ಸೀರೆಗಳು ಕೂಡ ಮಾನಸಿಕವಾಗಿ ಒತ್ತಡಗಳಿಗೆ ಕಾರಣವಾಗಿರುತ್ತವೆ. ಅಂಥ ಸೀರೆಗಳಿಗೆ ಮೈನಕ್ಕೊಪ್ಪುವ ವಿನ್ಯಾಸ ದೊರೆತು ಧರಿಸಿದಾಗ ಸಿಗುವ ಖುಷಿ ಮನದ ಒತ್ತಡವನ್ನು ಕರಗಿಸಲಿದೆ. ಪ್ರತಿ ಹಬ್ಬ, ಜನ್ಮದಿನ, ಪಾರ್ಟಿ ಎಂಬೆಲ್ಲ ಕಾರಣಗಳನ್ನು ಮುಂದಿಟ್ಟು ಸೀರೆಗಳ ಖರೀದಿಸಿ ಕಪಾಟಿನಲ್ಲಿ ತುಂಬಿಡುವ ಬದಲು ಕಪಾಟಿನಲ್ಲಿರುವ ಹಳೇ ಸೀರೆಗಳಿಗೆ ಹೊಸ ರೂಪ ಕೊಟ್ಟು ಪುನರ್‌ಬಳಕೆ ಮಾಡುವುದು ಉತ್ತಮ. ಇದರಿಂದ ಹಣವೂ ಉಳಿಯಲಿದೆ. ಕಪಾಟಿನಲ್ಲಿ ತುಂಬಿಕೊಂಡ ಸೀರೆಗಳಿಗೂ ಮುಕ್ತಿ ಸಿಗಲಿದೆ ಎಂಬುದು ಸೀಮಾ ನೀಡುವ ವಿಶ್ಲೇಷಣೆ.

‘ಈಗೆಲ್ಲ ಮಾರುಕಟ್ಟೆಯ ಶೋರೂಂಗಳಲ್ಲಿ ಇಟ್ಟಿರುವ ಡಿಸೈನ್ ಬಟ್ಟೆಗಳನ್ನು ಖರೀದಿಸಬೇಕೆಂದರೆ ಮೂರರಿಂದ ನಾಲ್ಕು ಸಾವಿರದವರೆಗೂ ಹಣ ತೆರಬೇಕಾಗುತ್ತದೆ. ನಾನು ಸಿದ್ಧಪಡಿಸುವ ಡ್ರೆಸ್‌ಅನ್ನು ಮಾರುಕಟ್ಟೆಯಲ್ಲಿ ಖರೀದಿಸಬೇಕೆಂದರೆ ಕನಿಷ್ಠವೆಂದರೂ 2 ಸಾವಿರದಿಂದ 3 ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಅದರ ಬದಲು ಹಳೆ ಸೀರೆಯಿಂದ ಹೆಚ್ಚೆಂದರೂ ₹1 ಸಾವಿರದಲ್ಲಿ ಸುಂದರ, ಟ್ರೆಂಡಿ ಡ್ರೆಸ್‌ಅನ್ನು ಸಿದ್ಧಪಡಿಸಬಹುದು. ಇದರಿಂದ ಕಪಾಟಿನಲ್ಲಿ ಜಾಗವಿರದಂತೆ ಮಾಡುವ ಸೀರೆಗಳಿಗೂ ಮುಕ್ತಿ ಕೊಟ್ಟಂತಾಗಲಿದೆ ಹಾಗೂ ಕಡಿಮೆ ಖರ್ಚಿನಲ್ಲಿ ಸುಂದರ ಡ್ರೆಸ್‌ಅನ್ನು ಧರಿಸಿದಂತಾಗಲಿದೆ. ಅಲ್ಲದೆ ಸೀರೆಯಿಂದ ಡಿಸೈನ್ ಮಾಡಲಾದ ಡ್ರೆಸ್‌ಅನ್ನು ಧರಿಸಲು ಯಾವುದೇ ನಿರ್ಬಂಧವಿರುವುದಿಲ್ಲ. ತಾಯಿಯ ಡ್ರೆಸ್‌ಅನ್ನು ಮಗಳೂ ಧರಿಸಬಹುದು. ಮಗಳಿಗೆ ಡಿಸೈನ್ ಮಾಡಲಾದ ಡ್ರೆಸ್‌ಅನ್ನು ತಾಯಿಯೂ ಧರಿಸಬಹುದು. ಆ ಬಗೆಯಲ್ಲೇ ನನ್ನ ವಿನ್ಯಾಸ ಇರಲಿದೆ’ ಎನ್ನುತ್ತಾರೆ ಸೀಮಾ.

ಸೀಮಾ ಎಸ್.ಕೆ. ಸಂಪರ್ಕ: **7019594749**





## ಖಾದಿ ಕಸೂತಿ

ಸೀಮಾ ಎಸ್‌ಕೆ. ತಮ್ಮ ಫ್ಯಾಷನ್ ಡಿಸೈನ್‌ಗಳಿಗೆ ಸ್ವತಃ ರೂಪದರ್ಶಿಯೂ ಹೌದು. ಖಾದಿ ಬಟ್ಟೆ ಮೇಲೆ ಕಸೂತಿ ಮೂಡಿಸಿ ಸೈ ಎನಿಸಿಕೊಂಡಿದ್ದಾರೆ. ಸಾಕಷ್ಟು ಕಡೆಗಳಲ್ಲಿ ಖಾದಿ ಕಸೂತಿ, ಆರಿ ಕಲೆ ಮೇಲೆ ತರಬೇತಿ ನೀಡಿದ್ದಾರೆ. ಪಾದರಕ್ಷೆ, ಮಾಸ್ಕ್, ಬ್ಯಾಗ್‌ಗಳ ಮೇಲೂ ಕಸೂತಿ ಹಾಕಿ ಶಹಬ್ಬಾಸ್ ಎನಿಸಿಕೊಂಡಿದ್ದಾರೆ. ಫ್ಯಾಬ್ರಿಕ್ ಜ್ಯುವೆಲ್ಲರಿಗಳನ್ನೂ ಮಾಡಿ ಗಮನಸೆಳೆದಿದ್ದಾರೆ.